

# ಕುಂಜುಮ್

## ಕಾಳಿ ಅವತಾರದ ಕುಂತಿಯ ದೇವಾಲಯ

ದೇವಭೂಮಿ ಎಂದೇ ಹೆಸರಾಗಿರುವ ಹಿಮಾಚಲಪ್ರದೇಶ ತನ್ನೆಲ್ಲಾ ರೌದ್ರ ರಮಣೀಯತೆಯ ಜೊತೆಗೆ, ಅಡಿಗಡಿಗೆ ಪುರಾಣದ ಕಥೆಗಳು, ಐತಿಹ್ಯಗಳ ಗುರುತುಗಳನ್ನು ಹೊಂದಿರುವ ಜಾಗ. ಭಕ್ತಿಯ ಸುಧೆ ಮತ್ತು ನಿಸರ್ಗಸೌಂದರ್ಯದ ಪ್ರಭೆ – ಎರಡೂ ಇಲ್ಲಿ ಮೇಳೈಸಿವೆ. ಅಂತಹ ಒಂದು ಜಾಗವೇ ಕುಂಜುಮ್.

■ ನಟರಾಜ್ ಎಸ್ ಭಟ್

ಈ ಲೇಖನದ ಶೀರ್ಷಿಕೆ ನೋಡಿ ಅಚ್ಚರಿಯಾಯ್ತಾ? ಇದೇನಿದು, ಪುರಾಣಗಳಲ್ಲಿ ಬರುವ ಕಾಳಿಗೂ, ದ್ವಾಪರಯುಗದ ಕುಂತಿಗೂ ಎತ್ತಣಿಂದೆತ್ತ ಸಂಬಂಧವಯ್ಯ ಎಂಬ ಪ್ರಶ್ನೆ ಮನಸಲ್ಲಿ ಸುಳಿದಾಡಿತಾ? ನಿಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಸಿಗಬೇಕು ಎಂದಾದರೆ ಉತ್ತರದ ಹಿಮಾಚಲದತ್ತ ಸಾಗಬೇಕು. ಈಗಿಂದೀಗಲೇ ಅಲ್ಲಿಗೆ ಹೋಗುವುದು ಕಷ್ಟ ಎಂಬುದು ನನಗೂ ಗೊತ್ತು. ಸರಿ, ನಾನೇ ಆ ಜಾಗದ ಕುರಿತು ಹೇಳುತ್ತೇನೆ ಕೇಳಿ.

ಈ ಸ್ಥಳ ಪ್ರವಾಸಿಗರಿಗೆ, ಹೊರಜಗತ್ತಿಗೆ ಹೆಚ್ಚು ಪರಿಚಿತವಲ್ಲ. ಏಕೆಂದರೆ ಈ ಸ್ಥಳಕ್ಕೆ ತಲುಪುವ ಮಾರ್ಗ ತುಂಬಾ ದುರ್ಗಮವಾಗಿದೆ. ಇದು 'ಸ್ಪಿಟಿ ಮತ್ತು ಲಾಹೋಲ್' ಜಿಲ್ಲೆಗೆ ಸೇರಿದ ಜಾಗ. ಸಮುದ್ರ ಮಟ್ಟದಿಂದ ಸುಮಾರು 15,000 ಅಡಿಗಳ ಎತ್ತರ ಹಾಗೂ ಮನಾಲಿಯಿಂದ 122 ಕಿ.ಮೀ. ದೂರದಲ್ಲಿದೆ.

ಕಿಲೋಮೀಟರ್‌ಗಳ ಲೆಕ್ಕಾಚಾರದಲ್ಲಿ ನೋಡಿದರೇನೋ ಹತ್ತಿರವಾಗಿಯೇ ಕಾಣುತ್ತದೆ. ಹಾಗಂತ ಅದೇ ಉತ್ಸಾಹದಲ್ಲಿ ಹೊರಟರೆ ದುರ್ಗಮ ದಾರಿಯೇ ನಿಮ್ಮ ಉಮೇದಿಗೆ ಬ್ರೇಕ್ ಹಾಕುತ್ತದೆ. 122 ಕಿ.ಮೀ. ಸಾಗಲು ಸುಮಾರು 6–8 ಗಂಟೆಗಳು ಬೇಕಾಗುತ್ತವೆ. ಅಲ್ಲಿನ ಲೋಕಲ್ ವಾಹನಗಳಲ್ಲೇ ತೆರಳುವುದು ಉತ್ತಮ. ಮಾರ್ಗಮಧ್ಯದಲ್ಲಿ ಪ್ರಕೃತಿಯ ಸೊಬಗು, ನಿರ್ಜನ ಪ್ರದೇಶಗಳು ಆಯಾಸವನ್ನು ಮರೆಸಿಬಿಡುತ್ತದೆ. ರಸ್ತೆಯಲ್ಲಿ ಸಾಗುತ್ತಿದ್ದೇವೋ ಹಿಮದಲ್ಲಿ ಅಥವಾ ನದಿಯಲ್ಲಿ ಸಾಗುತ್ತಿದ್ದೇವೋ ತಿಳಿಯುವುದಿಲ್ಲ; ಅಷ್ಟು ಹಿಮ ರಸ್ತೆಯ ಮೇಲೆ ಮೈಚಾಚಿ ಮಲಗಿರುತ್ತದೆ. ಇಷ್ಟೆಲ್ಲ ಸಾಹಸ ಮಾಡಿಕೊಂಡು ತಿರುವು ಮುರುವುಗಳ ರಸ್ತೆಯಲ್ಲಿ ಸಾಗಿದರೆ ಸಿಗುವುದೇ ಕುಂಜುಮ್ ಪಾಸ್.

